ಮುಖಾಂತರ ವಿನಂತಿ ಮಾಡಿಕೊಳ್ಳುವುದಿಷ್ಟೇ, ಇವತ್ತು ರಾಜ್ಯಪಾಲರು ಭಾಷಣ ಮಾಡಿದಂತಹ ಸಂದರ್ಭದಲ್ಲಿ ಎಲ್ಲಾ ವಿಷಯಗಳನ್ನು ಗಮನಕ್ಕೆ ತರಬೇಕಾಗಿತ್ತು. ಆ ರೀತಿಯಾಗಿ ಗಮನಕ್ಕೆ ತರುವಂತಹ ಪ್ರಯತ್ನ ಮಾಡಲಿಲ್ಲ ನಾನು ಇನ್ನೂ ಹೆಚ್ಚು ಮಾತನಾಡಬೇಕೆಂದು ಇದ್ದೆ. ತಾವು ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(1.) ವಿಷಯ : ಪೊಲೀಸ್ ದೌರ್ಜನ್ಯದ ಬಗ್ಗೆ.

ಶ್ರೀ ಕೆ.ಜಿ.ಬೋಪಯ್ಯ (ವಿರಾಜಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಹೊಸ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಈ ಪೋಲೀಸ್ ದೌರ್ಜನ್ಯ ವ್ಯವಸ್ಥಿತವಾಗಿ ನಡೆಯುತ್ತಿದೆ. ಈ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು ಯಾವ ರೀತಿ ಇದಾರೆಂದರೆ ಪೊನ್ನಂಪೇಟೆಯಲ್ಲಿ ಸುಬ್ರಮಣಿ ಎಂಬ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಇದ್ದಾರೆ. ಗೋಣಿಕೊಪ್ಪ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಆತ ವಾಸ ಇದ್ದಾನೆ. ಅಲ್ಲಿ ಕ್ವಾರ್ಟ್ರಸ್ ಎಲ್ಲಾ ವ್ಯವಸ್ಥೆ ಇದ್ದರೂ ಸಹ ಅವನು ಗೋಣಿಕೊಪ್ಪದಲ್ಲಿ ವಾಸ ಇದ್ದಾನೆ. ಈತನು ಅವರಿಗೆ ಆಪ್ತರಾಗಿರುವ ಖಾಸಗಿ ಮನೆಯಲ್ಲಿ ವಾಸವಿದ್ದಾರೆ. 22ನೇ ತಾರೀಖು ರಾತ್ರಿ 11.30 ಗಂಟೆಗೆ ಖಾಸಗಿ ವಾಹನದಲ್ಲಿ wrong sideನಲ್ಲಿ ಒಂದು ಈ ಕಡೆಯಿಂದ ಒಬ್ಬ ಸಾರ್ವಜನಿಕ ವ್ಯಕ್ತಿ ಹೋದಾಗ ಅವಾಚ್ಯ ಶಬ್ದಗಳಿಂದ ಬೈಯುತ್ತಾನೆ. Police Sub-Inspector ಬರುವಾಗ ದಾರಿ ಬಿಡುವುದಕ್ಕೆ ಆಗುವುದಿಲ್ಲ. ಅವರು ಯಾವ stage ನಲ್ಲಿದ್ದರು ಎನ್ನುವಂತಹದ್ದು ಗೊತ್ತಾಗಿದೆ. ಅವರು ಖಾಸಗಿ ವಾಹನದಲ್ಲಿ ಬಂದಾಗ ಅವರು ಪೊಲೀಸ್‌ನವರು ಎಂದು ಹೇಗೆ ಗೊತ್ತಾಗುತ್ತದೆ? ಅವರ ಮೇಲೆ ಹಲ್ಲೆ ನಡೆಸಿ ಅಲ್ಲಿಯೇ immediate ಆಗಿ ಗೋಣಿಕೊಪ್ಪ Police Stationಗೆ ಹೋಗಿ ದೂರು ಕೊಟ್ಟು ಮೊಕದ್ದಮೆಯನ್ನು ದಾಖಲು ಮಾಡುತ್ತಾರೆ. ಇವರು ತನ್ನ jurisdiction, ವ್ಯಾಪ್ತಿಯನ್ನು ಬಿಟ್ಟು ಬೇರೆ ಕಡೆಯಲ್ಲಿ ಮನೆಯನ್ನು ಮಾಡಿಕೊಂಡಿರುವುದೇ ಅಕ್ಷಮ್ಯ ಅಪರಾಧವಾಗಿದೆ. ಅದೂ ಖಾಸಗಿ ಮನೆಯಲ್ಲಿ! ಇಂತಹ ಪೊಲೀಸ್‌ನವರು ಇದ್ದರೆ ಇದು ಹೇಗೆ ಆಗಬಹುದು? ಈ ಅಧಿಕಾರಿಯ ಮೇಲೆ ಖಂಡಿತವಾಗಿ ನೀವು ಕಾನೂನು ಕ್ರಮ ತೆಗೆದುಕೊಳ್ಳಬೇಕು. ಅದರ ಜೊತೆಗೆ

ಇನ್ನೊಬ್ಬರು ನಾಪೋಕ್ಲುನಲ್ಲಿರುವಂತಹ Sub-Inspector ಇವರದೂ ಸಹ ಇದೇ ಕಥೆಯಾಗಿದೆ. 29ನೇ ತಾರೀಖು ರಾತ್ರಿ ಮದುವೆ ಆಗು ಪಾರಾಣೆಯಲ್ಲಿ ಅವರ jurisdiction ನಲ್ಲಿಯೇ ಬರುತ್ತದೆ. ಕೊಡಗಿನಲ್ಲಿ ಮದುವೆಯು ಹೇಗೆ ನಡೆಯುತ್ತದೆ ಎಂದು ನಿಮಗೆ ಗೊತ್ತಿದೆ. ನೀವು ಅದೇ ಜಿಲ್ಲೆಯವರಿದ್ದೀರಿ, ನೀವು ಬಹಳ ಮದುವೆಗೆ ಹೋಗುತ್ತೀರಿ, ನಾಡಿದ್ದು ತಾವು ಅಲ್ಲಿಗೆ ಬರುತ್ತೀರೆಂದು ಇದೆ. ಆ ಮದುವೆಯಲ್ಲಿ ಆದಂತಹ ಸಣ್ಣಪುಟ್ಟ ಗಲಾಟೆಯನ್ನೇ ದೊಡ್ಡದು ಮಾಡಿಕೊಂಡು ಅಲ್ಲಿಯ ಕೊಣಜಗೇರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಅವರು ಜಗಳವನ್ನು ಬಿಡಿಸುವುದಕ್ಕೆ ಹೋಗಿದ್ದಕ್ಕೆ ಅಲ್ಲಿ ಆದಂತಹ ಘಟನೆಯನ್ನು ದೊಡ್ಡದು ಮಾಡಿ ಅಧ್ಯಕ್ಷರನ್ನು ಸೇರಿ 307 section ನಲ್ಲಿ ಕೇಸ್ ಹಾಕಿ ಒಳಗೆ ಕಳುಹಿಸುವಂತಹ ಕೆಲಸ ಮಾಡಿದ್ದಾರೆ. ಈ Sub-Inspector ಕೂಡ ಅಷ್ಟೇ ಇವರು police quarters ನಲ್ಲಿ ವಾಸವಿರುವುದಿಲ್ಲ, ಇವರು ಬೇರೆ ಕಡೆಯಲ್ಲಿ ವಾಸವಿದ್ದಾರೆ. ಇವರು ಬೇರೆ ಕಡೆಯಲ್ಲಿ ಅವರಿಗೆ ಆಪ್ತರಿರುವ ಕಡೆಯಲ್ಲಿಯೇ ವಾಸವಾಗಿದ್ದಾರೆ. ಆ ಮನೆಯ ಓನರ್ ಕೆಲಸ ಏನೆಂದರೆ ಅಲ್ಲಿ ಪ್ರತಿದಿನ ಮರಳು ದಂಧೆ ಮಾಡುವುದು. ಕೊಡಗಿನಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ ಅದೆಲ್ಲವನ್ನು ಮಾಡುತ್ತಾರೆ, ಅವರ ಮನೆಯಲ್ಲಿಯೇ ಇವರು ಇದ್ದಾರೆ. ಇದನ್ನು ತಡೆಯುವಂತಹ ಪ್ರಯತ್ನವನ್ನು ಮಾಡಿದವರ ಮೇಲೆ ಈ ರೀತಿಯ ಕೇಸ್ ಹಾಕುವುದು ಈ ಒಂದು ವ್ಯವಸ್ಥೆಯ ಬಗ್ಗೆ ಈಗಲೇ ಕಡಿವಾಣವನ್ನು ಹಾಕದೆ ಇದ್ದರೆ ಮುಂದೇನಾಗಬಹುದು? ನನಗಂತೂ ಬಹಳ ಹೆಮ್ಮೆ ಇದೆ ಏಕೆಂದರೆ ನಮ್ಮ ಜಿಲ್ಲೆಯವರೆ ಒಬ್ಬರು ಗೃಹ ಸಚಿವರಾಗಿದ್ದಾರೆ, ಅವರು ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಆದರೆ ಈ ಜಿಲ್ಲೆಯಿಂದಲೇ ಪೊಲೀಸ್ ದೌರ್ಜನ್ಯವು ಪ್ರಾರಂಭವಾಗಿದೆ. ಇದಕ್ಕೆ ಕುಮ್ಮಕ್ಕನ್ನೂ ಸಹ ಕೊಡುತ್ತಿದ್ದಾರೆ. ಇದು ನಿಲ್ಲಬೇಕು, ಅಲ್ಲಿ ಒಬ್ಬ ವೈದ್ಯರು ಕೂಡ ಇದ್ದಾರೆ.

ಅಧ್ಯಕ್ಷರು : ಅದು ಬೇಡ. ಮಾನ್ಯ ಗೃಹ ಸಚಿವರು ಉತ್ತರವನ್ನು ಹೇಳಲಿ.

ಶ್ರೀ ಕೆ.ಜಿ.ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಅದನ್ನು ಹೇಳುತ್ತೇನೆ. ಈ ವೈದ್ಯರ ಕರ್ತವ್ಯ ಸ್ಥಳ ಮಡಿಕೇರಿ. ಮಡಿಕೇರಿಯಿಂದ ನಾಪೋಕ್ಲುಗೆ ಸುಮಾರು 22 ಕಿ.ಮೀ ಆಗುತ್ತದೆ. ಅಲ್ಲಿ ವಸತಿ ಗೃಹ ಇದ್ದರೂ ಸಹ ಅವರು ಅಲ್ಲಿ ವಾಸ ಇರುವುದಿಲ್ಲ. ಬಹಳ ವರ್ಷಗಳಿಂದ ಎಲ್ಲಾ doctors ಗಳಿಗೆ quartersಗಳು

ಇದೆ. ಇವರು ನಾಪೋಕ್ಲುಗೆ ಹೋಗಿ ಅಲ್ಲಿಯೇ ವಾಸ ಇದ್ದುಕೊಂಡು ಅಲ್ಲಿಯೇ ಒಂದು ಕ್ಲಿನಿಕ್ ಅನ್ನು ನಡೆಸಿಕೊಂಡು ಅಲ್ಲಿ ರಾಜಕೀಯವಾಗಿ ಎಲ್ಲವನ್ನೂ ಮಾಡುತ್ತಿದ್ದಾರೆ. ಈ doctor ಇದಕ್ಕೆ ಕುಮ್ಮಕ್ಕು ಕೊಟ್ಟಿದ್ದಾರೆ. ಹಿಂದೆ ಇವರು ಒಂದು murder case ನಲ್ಲಿ involve ಆಗಿದ್ದರು. ನಲ್ಲಿ ಆಗಿದ್ದಕ್ಕಾಗಿ ಬಹುಶಃ ಈ ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಊರಿನ ಒಂದು ಹುಡುಗಿಯ ಕೊಲೆಯಲ್ಲಿ ಆ doctor ಅಪರಾಧಿ ಆಗಿದ್ದಾರೆ. ಅದನ್ನು ನೆಪವಾಗಿಟ್ಟುಕೊಂಡು ಈ ರೀತಿಯಾಗಿ 307 ಹಾಕಿ ಪೊಲೀಸ್ ದೌರ್ಜನ್ಯ ಮಾಡುವುದಾದರೆ ಹಿಂದೆ ಇಡೀ ಜಿಲ್ಲೆಯಿಂದ ಆತನ ಮೇಲೆ 2006ರಲ್ಲಿ ದೂರು ಆಗಿ ಆತನನ್ನು ಚಾಮರಾಜನಗರಕ್ಕೆ ವರ್ಗ ಮಾಡಿದ್ದರು. ಆದರೆ ಅತನು ವರ್ಗಾವಣೆಯಾದ ಸ್ಥಳಕ್ಕೆ ಹೋಗಲೇ ಇಲ್ಲ. ಅವನು ಮಡಿಕೇರಿಯಲ್ಲಿಯೇ 15 ಎಕರೆ ತೋಟ ಎಲ್ಲವನ್ನೂ ಮಾಡಿಕೊಂಡು ಒಬ್ಬ ಸರ್ಕಾರಿ ವೈದ್ಯರು ಈ ರೀತಿಯಾಗಿ ಮಾಡುವುದಾದರೆ ಖಂಡಿತವಾಗಿ ಈ ಇಬ್ಬರು ಅಧಿಕಾರಿಗಳ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಇಂತಹ ಸುಳ್ಳು ಮೊಕದ್ದಮೆಯನ್ನು ದಾಖಲು ಮಾಡಿದರೆ ಜಿಲ್ಲೆಯಲ್ಲಿ ಅಶಾಂತಿಯಾಗುತ್ತದೆ.

ಶ್ರೀ ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಇಲ್ಲಿ ನೀವು ಬರೆದುಕೊಟ್ಟಿಲ್ಲ.

ಶ್ರೀ ಅಪ್ಪಚ್ಚು ರಂಜನ್ : ನಾನು Joint ಆಗಿ ಕೊಟ್ಟಿದ್ದೇನೆ.

ಅಧ್ಯಕ್ಷರು : ಆಯಿತು. ತಾವು ಮಾತನಾಡಿ.

ಶ್ರೀ ಅಪ್ಪಚ್ಚು ರಂಜನ್ (ಮಡಿಕೇರಿ) : ಸನ್ಮಾನ್ಯ ಅಧ್ಯಕ್ಷರೆ ಈಗಾಗಲೇ ಸನ್ಮಾನ್ಯ ಬೋಪಯ್ಯನವರು ಹೇಳಿರುವಂತಹ ವಿಚಾರ, ನಾಪೋಕ್ಲುನಲ್ಲಿ–ರುವಂತಹ Sub-Inspector ಯಾರು ಇದ್ದಾರೆ. ಆ ಮನೆಯ ಓನರ್ ಯಾರಿದ್ದಾರೆಂದರೆ ಅವರು ಒಬ್ಬ smuggler ಆಗಿದ್ದಾರೆ. ಅವರ ಮನೆಯಲ್ಲಿ ಇವರು ವಾಸ ಇದ್ದುಕೊಂಡು ಈ ರೀತಿಯಾಗಿ ದಂಧೆ ನಡೆಸುವಂತಹ ಎಲ್ಲದಕ್ಕೂ ಸಹಕಾರವನ್ನು ಕೊಡುವಂತಹ ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೆ ಮದುವೆಯಲ್ಲಿ ಆದಂತಹ ಗಲಾಟೆಯನ್ನು ಅಲ್ಲಿ ಕೈಯಲ್ಲಿ ಹೊಡೆದಾಟವಾಗಿದ್ದರೂ ಕೂಡ 307 ಕೇಸ್ ಅನ್ನು ಹಾಕಿದ್ದಾರೆ.

ಅಧ್ಯಕ್ಷರು : ಮಾನ್ಯ ಬೋಪಯ್ಯನವರು ಈ ಬಗ್ಗೆ ಹೇಳಿದ್ದಾರಲ್ಲಾ ?

ಶ್ರೀ ಅಪ್ಪಚ್ಚು ರಂಜನ್ : ಅವರನ್ನು ಈ ಕೂಡಲೇ ಅಮಾನತ್ತು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅವರನ್ನು ಅಮಾನತ್ತು ಮಾಡಿ ಈ ಬಗ್ಗೆ enquiry ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಆಯಿತು. ಮಾನ್ಯ ಗೃಹ ಸಚಿವರೆ, ತಾವು ಹೇಳಿ.

ಶ್ರೀ ಕೆ.ಜಿ.ಜಾರ್ಜ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಜಿ.ಬೋಪಯ್ಯನವರು ಹಾಗೂ ಶ್ರೀ ಅಪ್ಪಚ್ಚು ರಂಜನ್‌ರವರು ಪೊನ್ನಂಪೇಟೆ Sub-Inspector ವಿಚಾರ ಹಾಗೂ ನಾಪೋಕ್ಲು Sub-Inspector ವಿಚಾರದ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ. ನಾನು ಈ ಬಗ್ಗೆ ಕೂಡಲೇ ಸಂಬಂಧಪಟ್ಟಂತಹ ಅಧಿಕಾರಿಗಳಿಂದ ವರದಿಯನ್ನು ತರಿಸಿ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

(2). ವಿಷಯ : ತುಮಕೂರು ಜಿಲ್ಲೆಯ ಮಧುಗಿರಿ ಪಟ್ಟಣ ಮತ್ತು ತಾಲ್ಲೂಕಿನಲ್ಲಿರುವ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿ ಕೊರತೆಯಿಂದಾಗಿ ಸಾರ್ವಜನಿಕರು ಅನುಭವಿಸುತ್ತಿರುವ ತೊಂದರೆಗಳ ಬಗ್ಗೆ.

ಶ್ರೀ ಕೆ.ಎನ್.ರಾಜಣ್ಣ (ಮಧುಗಿರಿ) : ಸನ್ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಕ್ಷೇತ್ರದಲ್ಲಿ ಇರತಕ್ಕಂಥ ಆರೋಗ್ಯ ಕೇಂದ್ರಗಳು ಹಾಗೂ ತಾಲ್ಲೂಕಿನಲಿರತಕ್ಕಂಥ 100 ಬೆಡ್ಸ್ ಆಸ್ಪತ್ರೆಗಳಲ್ಲಿ ಖಾಲಿ ಇರತಕ್ಕಂಥ ಡಾಕ್ಟರ್ಸ್ ಮತ್ತು ಇತರೆ ಸಿಬ್ಬಂದಿಗಳು ಏನಿದ್ದಾರೆ, ಆ ಸಿಬ್ಬಂದಿಗಳ ಕೊರತೆಯಿಂದ ಜನರಿಗಾಗಿರತಕ್ಕಂಥ ತೊಂದರೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಈ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ): ಮಾನ್ಯ ಸದಸ್ಯರಾದ ಶ್ರೀ ರಾಜಣ್ಣನವರು ಎತ್ತಿರುವ ಪ್ರಶ್ನೆಗೆ ಆರೋಗ್ಯ ಸಚಿವರ ಪರವಾಗಿ ಒಂದು ಹೇಳಿಕೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ತುಮಕೂರು ಜಿಲ್ಲೆಯ ಮಧುಗಿರಿ ಪಟ್ಟಣ ಮತ್ತು ತಾಲ್ಲೂಕಿನಲ್ಲಿರುವ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿ ಕೊರತೆಯಿಂದಾಗಿ ಸಾರ್ವಜನಿಕರು ಅನುಭವಿಸುತ್ತಿರುವ ತೊಂದರೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.